ಅಂಕಣ – ಏಳು

## ತಲ್ಲಣಿಸದಿರು ಕಂಡ್ಯ ತಾಳು ಮನವೆ...!

56

# ನಾವೇಕೆ ಹೀಗಾಗುತ್ತಿದ್ದೇವೆ

• ಡಾ. ಆರ್. ವಿ. ಪಾಟೀಲ

ಮೊನ್ನೆ ಮೊನ್ನೆಯವರೆಗೂ ನಾವೆಲ್ಲ ಒಂದೇ ಗೂಡಿನಲ್ಲಿ ನಗು-ನಗುತ್ತಾ ಬದುಕು ಸಾಗಿಸುತ್ತಿರುವುದು ನೆನಪಾದಾಗ ಮನಸ್ಸು ತುಂಬಾ ಕಸಿವಿಸಿ ಆಗುತ್ತದೆ ಅಲ್ಲವೆ. ಚಿಕ್ಕಮಕ್ಕಳಿದ್ದಾಗ ತಾಯಿಯ ಮಡಿಲಲ್ಲಿ ಆಡಿ, ಅಪ್ಪನ ಹೆಗಲ ಮೇಲೆ ಕುಕ್ಕಿಮರಿಯಾಗಿ ರಾಜನಾಗಿ ಮೆರೆದು, ಅಜ್ಜನ ಕೊನೆ ಬೆರಳು ಹಿಡಿದು ಓಣಿಯಲ್ಲಿ ಓಡಾಡಿ, ಅಜ್ಜಿ ಮಾಡಿಕೊಡುವ ಬೆಲ್ಲದ ಹೋಳಿಗೆ, ರೊಟ್ಟಿ ಉಂಡಿ ತಿಸನ್ನುತ್ತಾ ಓರೆಗೆಯವರೊಂದಿಗೆ ಅಂಗಳದಲ್ಲಿ ಒಟ್ಟಾಗಿ ಆಡಿ ಬೆಳೆದದ್ದು ನೆನಪಾದಾಗ ಸಂತೋಷಕ್ಕೊಂದು ನಗು, ಅಜ್ಜ-ಅಜ್ಜಿ ಇಲ್ಲದ ದುಃಖಕ್ಕೊಂದು ಕಣ್ಣೀರು ಇಷ್ಟೆ. ಛೆ! ಜೀವನ ಎಂದು ತಲೆ ಅಲ್ಲಾಡಿಸಿ ಇಂದಿನ ದಿನದಲ್ಲಿ ದಿನಗಳನ್ನು ಕಳೆಯಲು ಹಲವಾರು ಹುನ್ನಾರ ನಡೆಸುತ್ತಾ ಜೀವನದಲ್ಲಿ ಅದೇಷ್ಟೆ ಪೊಲಿಟಿಕ್ಸ ಮಾಡಿ ಮುಖವಾಡ ಧರಿಸಿ, ನಮ್ಮವರಿಗೆ ನಮ್ಮವರಾಗದೆ, ಪರಕೀಯರಿಗೆ ಸ್ನೇಹಿತರಾಗದೆ, ಸ್ನೇಹಿತರಿಗೆ ಹಿತಶತ್ರುಗಳಲ್ಲಿ, ಅಪನಂಬಿಕೆಯ ಅಂತರಾಳದಲ್ಲಿ ನಂಬಿಕೆಯ ಗಿಡನೆಟ್ಟು ಮರವಾಗಿ ಬೆಳೆಸಿ ಅದರ ನೆರಳಲ್ಲಿ ಆಶ್ರಯ ಪಡೆದು ವಿಶ್ರಮಿಸುವ ನಾವುಗಳಿಂದು ಗಾರ್ಡನ್ ಕಟಿಂಗರ್ಸ್ ಆಗಿ ಬಿಟ್ಟಿದ್ದೇವೆ. ಇದನ್ನೆಲ್ಲ ನೋಡಿದ, ಕಂಡ, ಅನುಭವಿಸಿದ ಮನಸ್ಸುಗಳಿಗೆ ಅನ್ನಿಸುವುದು ನಾವೇಕೆ ಹೀಗಾಗುತ್ತಿದ್ದೇವೆ? ಎಂದು ಹ್ಞಾಂ! ಈ ಗಾರ್ಡನ್ ಕಟಿಂಗರ್ಸ್ ಅಂದರೇನು? ಇದೇನು ವಿಚಿತ್ರ ಎಂದಿರಾ ಇದನ್ನೆ ಕುರಿತು ನಿಮ್ಮೊಂದಿಗೆ ಮಾತಾಡಲು ಹೊರಟಿರುವುದು.

ಸತ್ಯ, ಪ್ರಾಮಾಣೀಕತೆ, ಯಾರಿಗೂ ಬೇಡವಾಗುತ್ತಿದೆ. ಮನಸ್ಸು ಸ್ವಹಿತಕ್ಕಾಗಿ ತುಡಿಯುತ್ತಿದೆ. ಪರಹಿತಕ್ಕಾಗಿ ಕಲ್ಲಾಗುತ್ತಿದೆ. ಕೆಲವರಂತೂ ನನಗೋಸ್ಕರ ಉಳಿದವರು ಬದುಕಬೇಕು. ನಮಗೆ ಅನುಕೂಲವಾಗಿರಬೇಕು. ನಿತ್ಯ ನಮ್ಮನ್ನು ಹೆಗಲ ಮೇಲೆಯೋ, ತಲೆ ಮೇಲೆಯೋ ಹೊತ್ತುಕೊಂಡು ಸದಾ ತಿರುಗಬೇಕು ಎಂಬ ಭಾವದಲ್ಲಿಯೇ ಅವರ ನಿತ್ಯದ ಜೀವನ ನಿರ್ವಹಣೆಯಾಗಿಬಿಟ್ಟಿದೆ. ಯಾಕೆ ಹೀಗಾಗುತ್ತಿದೆ? ಎಂಬುದಕ್ಕೆ ಉತ್ತರ ಹುಡುಕುವುದು ತುಂಬಾ ಕಷ್ಟ. ಏಕೆಂದರೆ ನಮ್ಮಷ್ಟಕ್ಕೆ ನಾವು ಕಬ್ಬಿಣದ ಪಡಿಯಚ್ಚಿನಲ್ಲಿ ಎರಕ ಹೊಯ್ದುಕೊಂಡು ಬಿಟ್ಟಿದ್ದೇವೆ. ಹಾಗೆ ನಿರ್ಮಾಣವಾದ ಮೂರ್ತಿ ಬೇರೆಯಾಗದು. ಸಿದ್ಧವಸ್ತುಗಳಾಗಿ ರೆಡಿಮೆಡ್ ಮನಸ್ಥಿಗೆ ಬಂದು ತಲುಪಿದ್ದೇವೆ.

ನಾನೇ ಶ್ರೇಷ್ಠ, ನನ್ನೆದುರಿಗಿರುವ ಇವರೆಲ್ಲ ತಿಳಿಗೇಡಿಗಳು ಎಂಬ ಭಾವದ ಜನ, ನನಗೆ ತುಂಬಾ ದೊಡ್ಡ ಜನ ಪರಿಚಯವಿದ್ದಾರೆ. ನಾನೊಬ್ಬ ಇನ್‌ಫ್ಲೂಯನ್ಸ್ಡ ಮನುಷ್ಯ, ನಾನೇ ವಿದ್ವಾಂಸ, ಚಿಂತಕ, ನಾನು ಪುಣ್ಯವಂತ ಅದಕ್ಕೆ ದೇವರು ನನ್ನನ್ನು ಹೀಗೆ ಇಟ್ಟಿದ್ದಾನೆ ಅನ್ನುವವರು, ನಾನು ಸುಂದರ, ನಾನು ಪದವೀಧರ, ನನ್ನ ಮಾತೇ ಸತ್ಯ, ನಾನು ಹೇಳುವುದನ್ನು ಅವನು ಕೇಳಲಿಲ್ಲ ನನಗೆ ಮೊದಲೇ ಗೊತ್ತಿತ್ತು ಹೀಗಾಗುತ್ತಿತ್ತೆಂದು ಅವನಿಗೆ ನಾನು ಎಷ್ಟು ಹೇಳಿದೆ ಕೇಳಲಿಲ್ಲ, ಅವನಿಗೆ ನಾನೇ ಸಹಾಯ ಮಾಡಿದ್ದು, ನನ್ನಿಂದಲೇ ಅವನು ಹೀಗಾಗಿದ್ದು ಎಂಬಂತಹ ನನ್ನ-ನಾನು ಎಂಬ ಪದಗಳ ಪ್ರಯೋಗಗಳಲ್ಲಿಯೆ ಇಡೀ ಜೀವನದ ಸಂದೇಶವಿಟ್ಟುಕೊಂಡು ಬದುಕುವವರ ಸಂಖ್ಯೆಯೇ



PRINCIPAL
J.S.S Banashankari Arts, Commerce &
Shantikumar Gubbi Science College,
DHARWAD - 580 004.

56